ಓಎಸ್.80/20
ಪಿಡಬ್ಲ್ಯು2

<u>ದಿನಾಂಕಃ 04-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲುಃ</u>- 7 ನೇ ಪ್ರತಿವಾದಿ ಪರವಾಗಿ ಶ್ರೀ. ಕೆ.ಎಸ್.ಹೆಚ್.ವಕೀಲರಿಂದಃ-**

ಈ ದಾವೆಯನ್ನು ಹೊಲದ ವಿಚಾರವಾಗಿ ಚಿಕ್ಕತಿಮ್ಮಯ್ಯರವರು ನಾಗಮ್ಮರವರ ಮೇಲೆ ಹಾಕಿದ್ದಾರೆ. 4 ಜನರ ಮೇಲೆ ಕೇಸು ಹಾಕಿದ್ದಾರೆ. ಅವರ ಹೆಸರು ರಂಗಧಾಮಪ್ಪ, ಮುದ್ದಪ್ಪ, ಇನ್ನೂ ಮುಂತಾದವರ ಮೇಲೆ ಕೇಸು ಹಾಕಿದ್ದಾರೆ. ಸ.ನಂ.248, 199/1 ರ ಆಸ್ತಿಗಳ ಮೇಲೆ ಈ ಕೇಸನ್ನು ಹಾಕಿದ್ದಾರೆ. ಎರಡೂ ಜಮೀನುಗಳ ನಿಖರವಾದ ವಿಸ್ತೀರ್ಣ ಮತ್ತು ಚಕ್ಕುಬಂಧಿ ಹೇಳಲು ಬರುವುದಿಲ್ಲ. 1 ನೇ ವಾದಿ ಚಿಕ್ಕತಿಮ್ಮಯ್ಯರವರ ತಂದೆಗೆ 5 ಜನ ಮಕ್ಕಳು. ನಾನು ಸುಳ್ಳು ಹೇಳುತ್ತಿದ್ದೇನೆ ಅವರಿಗೆ 5 ಜನ ಅಲ್ಲ 8 ಜನ ಮಕ್ಕಳು ಎಂದರೆ ಸರಿಯಲ್ಲ. ಚಿಕ್ಕರಂಗಪ್ಪರವರಿಗೆ ಚಿಕ್ಕತಿಮ್ಮಯ್ಯ, ರಂಗದಾಸಪ್ಪ, ಮುದ್ದಪ್ಪ, ಪುಟ್ಟಯ್ಯ, ನಾಗಮ್ಮ ಲಕ್ಕಮ್ಮ, ರಂಗಧಾಮಯ್ಯ ಮತ್ತು ಲಕ್ಷ್ಮೀದೇವಮ್ಮರವರು ಮಕ್ಕಳು ಎಂದರೆ, ಗಂಡು ಮಕ್ಕಳ ಹೆಸರು ಗೊತ್ತು ಹೆಣ್ಣು ಮಕ್ಕಳ ಹೆಸರು ಗೊತ್ತಿಲ್ಲ. ಅವರೆಲ್ಲಾ ಚಿಕ್ಕರಂಗಪ್ಪರವರ ಮಕ್ಕಳು ಎಂದರೆ ಸರಿ.

ರಂಗದಾಸಪ್ಪನಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ರಂಗದಾಸಪ್ಪರವರಿಗೆ ಮುದ್ದನಾಗಮ್ಮ, ರಾಮಕೃಷ್ಣಯ್ಯ ಮತ್ತು ಮಾಯಕ್ಕ ಎಂಬ ಮೂರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಮುದ್ದಪ್ಪನ ಹೆಂಡತಿ ಹೆಸರು ಪುಟ್ಟರಂಗಮ್ಮ ಎಂದರೆ ಸರಿ. ಅವರಿಗೆ ರಂಗಶಾಮಯ್ಯ ಎಂಬ ಮಗ ಇದ್ದಾನೆ ಎಂದರೆ ಸರಿ. ಪುಟ್ಟಯ್ಯರವರಿಗೆ ದೊಡ್ಡರಂಗಮ್ಮ ಎಂಬ ಹೆಂಡತಿ ಇದ್ದಾಳೆ ಎಂದರೆ ಸರಿ. ಪುಟ್ಟಯ್ಯ ಮತ್ತು ದೊಡ್ಡರಂಗಮ್ಮನಿಗೆ ಒಟ್ಟು 4 ಜನ ಮಕ್ಕಳು, ಅವರ ಹೆಸರು ನನಗೆ ಗೊತ್ತಿಲ್ಲ. ಪುಟ್ಟಯ್ಯ ಮತ್ತು ದೊಡ್ಡರಂಗಮ್ಮನಿಗೆ ಶ್ರೀರಂಗಯ್ಯ, ಜಯಲಕ್ಷ್ಮಿ, ಲಲಿತ ಮತ್ತು ಶಿವಕುಮಾರ್ ಎಂಬ ಮಕ್ಕಳಿದ್ದಾರೆ ಎಂದರೆ ಸರಿ. ರಂಗಧಾಮಯ್ಯರವರಿಗೆ ಒಟ್ಟು 3 ಜನ ಮಕ್ಕಳು ಎಂದರೆ ಸರಿ. ಅವರಿಗೆ ರಂಗಮ್ಮ, ಅನ್ನಪೂರ್ಣಮ್ಮ ಮತ್ತು ನಟರಾಜು ಎಂಬ ಮಕ್ಕಳಿದ್ದಾರೆ ಎಂದರೆ ಸರಿ. ಚಿಕ್ಕತಿಮ್ಮಯ್ಯರವರ ಹೆಂಡತಿ ಸರೋಜಮ್ಮ ಎಂದರೆ ಸರಿ.

ದಾವಾ ಆಸ್ತಿಯ ಅಕ್ಕ ಪಕ್ಕದಲ್ಲಿ ನನಗೆ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ. ನಾನು ಮತ್ತು ನನ್ನ ತಾತನವರು ಅನುಕೂಲ ಸ್ಥಿತಿಯಲ್ಲಿರುವುದರಿಂದ ನಾವುಗಳು ಕೂಲಿ ಕೆಸಲಕ್ಕೆ ಹೋಗುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ಯಾರು ಯಾರಿಗೆ ಯಾವ ದಾಖಲೆಯ ಮೂಲಕ ಬಂತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ಯಾವ ಯಾವ ವ್ಯವಹಾರಳಾಗಿವೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳಿಗೆ ಒಟ್ಟು ಕುಟುಂಬದ ಆದಾಯ ಇತ್ತೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿ. ಪುಟ್ಟಯ್ಯ ಎಂಬುವವರು ಕೆ.ಇ.ಬಿ. ಯಲ್ಲಿ ಕೆಲಸಕ್ಕೆ ಇದ್ದರು ಎಂದರೆ ಸರಿ. ಪುಟ್ಟಯ್ಯರವರು ದಾವಾ ಐಟಂ ನಂ.2 ನ್ನು ಅವರ ಸಂಬಳದಿಂದ ಖರೀದಿ ಮಾಡಿದ್ದರು ಎಂದರೆ ಎಂದರೆ ಸರಿಯಲ್ಲ. ಸ್ವತಃ ಮುಂದುವರೆದು ಹೇಳುತ್ತಾರೆ, ಅಣ್ಣ ತಮ್ಮಂದಿರೆಲ್ಲಾರೂ ಒಟ್ಟಿಗೆ ಇದ್ದಾಗ ಆಸ್ತಿ ಖರೀದಿ ಮಾಡಿದ್ದಾರೆ. ದಾವಾ ಐಟಂ ನಂ.2 ರ ಕ್ರಯ ಪತ್ರವನ್ನು ನಾನು ನೋಡಿಲ್ಲ.

ದಿಃ 22.08.1979 ರಲ್ಲಿ ರಂಗಧಾಮಯ್ಯರವರು ದಾವಾ ಐಟಂ ನಂ. 3 ರ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. ಸ್ವತಃ ಮುಂದುವರೆದು ಹೇಳುತ್ತಾರೆ, ಅಣ್ಣ ತಮ್ಮಂದಿರೆಲ್ಲಾ ಒಟ್ಟಿಗೆ ಇದ್ದಾಗ ಖರೀದಿ ಮಾಡಿದ್ದಾರೆ. ಈ ಹಿಂದೆಯೇ ಬಾಯಿ ಮಾತಿನ ಮೂಲಕ ದಾವಾ ಐಟಂ ನಂ.1 ರ ಆಸ್ತಿಯನ್ನು ಭಾಗ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತು. ದಾವಾ ಐಟಂ ನಂ.2 ಮತ್ತು 3 ರ ಆಸ್ತಿಯಲ್ಲಿ ಪುಟ್ಟಯ್ಯ ಮತ್ತು ರಂಗಧಾಮಯ್ಯರವರು ಸ್ವಾಧೀನಾನುಭವದಲ್ಲಿದ್ದರು ಎಂದರೆ, ಎಲ್ಲರೂ ಸ್ವಾಧೀನದಲ್ಲಿದ್ದರು. ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ನಾನು ದಾಖಲೆಗಳನ್ನು ನೋಡಿಲ್ಲ. ಹಾಗಾಗಿ ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಖರೀದಿ ಮಾಡಿದ ಆಸ್ತಿಯಲ್ಲಿ ರಂಗಧಾಮಯ್ಯ ತೀರಿ ಹೋದ ನಂತರ ಅವರ ಹೆಂಡತಿ ಮತ್ತು ಮಕ್ಕಳು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ, ಈಗ

ರಂಗಧಾಮಯ್ಯನವರ ಹೆಂಡತಿ ಮತ್ತು ಮಕ್ಕಳೇ ಸ್ವಾಧೀನಾನುಭವದಲ್ಲಿರುವುದು. ದಾವಾ ಐಟಂ ನಂ.1 ನ್ನು ಹೊರತುಪಡಿಸಿ ಇನ್ಯಾವುದೇ ಭಾಗ ಆಗುವ ಆಸ್ತಿಗಳು ಇಲ್ಲ ಎಂದರೆ ಸರಿಯಲ್ಲ. ಈ ಕೇಸಿನ ವಾದಿಗೂ ಮತ್ತು ನನಗೂ ವಿಶ್ವಾಸ ಎಂದರೆ ಸರಿ. ಸ್ವತಃ ಮುಂದುವರೆದು ಹೇಳುತ್ತಾರೆ, ಅವರು ನಮ್ಮ ಮನೆಯಲ್ಲೇ ಕೆಲಸ ಮಾಡುತ್ತಿದ್ದರು. ವಾದಿ ಮೋಟಾರು ರಿಪೇರಿ ಮಾಡಲು ನಮ್ಮ ಜಮೀನಿಗೆ ಬರುತ್ತಿದ್ದರು ಎಂದರೆ ಸರಿ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ವಾದಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಅಧಿಕ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ